# ಮದಗಜ ಪ್ರಹಸನ




ಅಂತೂ ಇಂತೂ ಎಸ್. ಮಹೇಶ್‌ಕುಮಾರ್ ನಿರ್ದೇಶನದ, ಶ್ರೀಮುರಳಿ ನಟನೆಯ ಚಿತ್ರಕ್ಕೆ 'ಮದಗಜ' ಶೀರ್ಷಿಕೆಯೇ ದೊರೆತಿದೆ. 'ಅಂತೂ ಇಂತೂ' ಎನ್ನಲು ಕಾರಣವಿದೆ. ಈ ಶೀರ್ಷಿಕೆಯ ಸಲುವಾಗಿ ನಡೆದ ಪ್ರಹಸನ ಸಣ್ಣದೇನಲ್ಲ.

ಕೆಲವು ತಿಂಗಳ ಹಿಂದೆ ಮಹೇಶ್‌ಕುಮಾರ್ ಮತ್ತು ಶ್ರೀಮುರಳಿ ಕಾಂಬಿನೇಷನ್‌ನ ಹೊಸ ಸಿನಿಮಾದ ಹೆಸರನ್ನು 'ಮದಗಜ' ಎಂದು ಪ್ರಕಟಿಸಲಾಗಿತ್ತು. ಆದರೆ 'ಮದಗಜ' ಶೀರ್ಷಿಕೆಯನ್ನು ಆಗಲೇ ನಿರ್ಮಾಪಕ ರಾಮು ವಾಣಿಜ್ಯಮಂಡಳಿಯಲ್ಲಿ ನೋಂದಣಿ ಮಾಡಿದ್ದರು. ಈ ಕುರಿತು ನಿರ್ದೇಶಕ ಮಹೇಶ್‌ಕುಮಾರ್ 'ನಾವು ಶ್ರೀಮುರಳಿ ಮದಗಜ' ಎಂದು ಇಟ್ಟುಕೊಳ್ಳುತ್ತೇವೆ. ರಾಮು ಅವರ ಮದಗಜಕ್ಕೂ ಶ್ರೀಮುರಳಿ ಮದಗಜಕ್ಕೂ ಸಂಬಂಧ ಇಲ್ಲ ಎಂದು ಹೇಳಿದ್ದರು. ಆ ಶೀರ್ಷಿಕೆ ನೀಡಲು ವಾಣಿಜ್ಯಮಂಡಳಿ ನಿರಾಕರಿಸಿತ್ತು. ರಾಮು ಅವರೂ ಮದಗಜ ಶೀರ್ಷಿಕೆಯನ್ನು ಬಿಟ್ಟುಕೊಡಲಾರೆ ಎಂದು ಪಟ್ಟು ಹಿಡಿದಿದ್ದರು.

ಆ ಎಲ್ಲ ಗೊಂದಲಗಳಿಗೆ ತೆರೆ ಎಳೆದಂತೆ 'ಮದಗಜ' ಎಂಬ ಹೆಸರಿನಲ್ಲಿಯೇ ಇತ್ತೀಚೆಗೆ ಚಿತ್ರದ ಫಸ್ಟ್ ಲುಕ್ ಬಿಡುಗಡೆ ಮಾಡಿದ್ದಾರೆ ಶ್ರೀಮುರಳಿ. ಹಾಗಾದರೆ ಗೊಂದಲಗಳೆಲ್ಲ ಬಗೆಹರಿದಿದ್ದಾದರೂ ಹೇಗೆ? ದರ್ಶನ್ ಮಧ್ಯಪ್ರವೇಶದಿಂದ.

ಶೀರ್ಷಿಕೆ ವಿವಾದವನ್ನು ದರ್ಶನ್ ಅವರ ಬಳಿಗೆ ಶ್ರೀಮುರಳಿ ಕೊಂಡೊಯ್ದಾಗ ದರ್ಶನ್ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ರಾಮು ಅವರ ಜೊತೆ ಖುದ್ದಾಗಿ ಮಾತನಾಡಿ ಶೀರ್ಷಿಕೆಯನ್ನು ಬಿಟ್ಟುಕೊಡುವಂತೆ ಸೂಚಿಸಿದ್ದಾರೆ. ಪರಿಣಾಮವಾಗಿ ಮುರಳಿ ಮದಗಜನಾಗಿ ತೆರೆಯ ಮೇಲೆ ಬರಲು ಸಾಧ್ಯವಾಗುತ್ತಿದೆ. ಈ ಸ್ನೇಹದ ಸಾಕ್ಷಿಯೆಂಬಂತೆ ಇತ್ತೀಚೆಗೆ ನಡೆದ 'ಮದಗಜ' ಫಸ್ಟ್‌ಲುಕ್ ರಿಲೀಸ್ ಕಾರ್ಯಕ್ರಮದಲ್ಲಿಯೂ ದರ್ಶನ್ ಬಂದು ಮುರಳಿಗೆ ಶುಭ ಹಾರೈಸಿ ಹೋಗಿದ್ದಾರೆ.

ಚಿತ್ರ: ಕೆ.ಎನ್. ನಾಗೇಶ್‌ಕುಮಾರ್

# ಸೃಜನ್ ಡಬಲ್ ಪಾರ್ಟ್!

ಸೃಜನ್ ಲೋಕೇಶ್ ಚಿತ್ರರಂಗಕ್ಕೆ ಎಲ್ಲಿಂದಲೋ ಬಂದವರೇನಲ್ಲ. ಆದರೆ ತಂದೆಯ ಜನಪ್ರಿಯತೆ ಮಗನನ್ನು ಹಿರಿತೆರೆಯ ಮೇಲೆ ಹಿಡಿದೆತ್ತಲಿಲ್ಲ. ಚಂದನವನದಲ್ಲಿ ಗಟ್ಟಿ ಕಾಲೂರಲು ನಡೆಸಿದ ಪ್ರಯತ್ನಗಳು ಯಶಸ್ವಿಯಾಗದೆ ಕಿರುತೆರೆಯಲ್ಲಿ 'ಮಜಾ ಟಾಕೀಜ್' ಮಾಡ್ಕೊಂಡು ಇದ್ದ ಸೃಜನ್ ಈಗ ಮತ್ತೆ ಹಿರಿತೆರೆಗೆ ಮರಳುತ್ತಿದ್ದಾರೆ. ಈ ಸಲ ಅವರದ್ದು ಡಬಲ್ ಪಾರ್ಟ್! ಸಿನಿಮಾದೊಳಗಿನ ದ್ವಿಪಾತ್ರ ಅಲ್ಲ, ನಟನೆ ಮತ್ತು ನಿರ್ಮಾಣ ಎರಡು ಪಾತ್ರಗಳನ್ನೂ ಅವರು ನಿರ್ವಹಿಸುತ್ತಿದ್ದಾರೆ.

ಲೋಕೇಶ್ ನಟಿಸಿದ್ದ 'ಪರಸಂಗದ ಗೆಂಡೆತಿಮ್ಮ' ಚಿತ್ರದ 'ಎಲ್ಲಿದ್ದೆ ಇಲ್ಲೀತನಕ ಎಲ್ಲಿಂದ ಬಂದ್ಯವ್ವ' ಹಾಡಿನ ಮೊದಲೆರಡು ಪದ ಇಟ್ಟುಕೊಂಡೇ 'ಎಲ್ಲಿದ್ದೆ ಇಲ್ಲೀತನಕ' ಹೆಸರಿನ ಸಿನಿಮಾ ಮಾಡಲು ಹೊರಟಿದ್ದಾರೆ. ಮಜಾ ಟಾಕೀಸ್‌ನಲ್ಲಿ ಸೃಜನ್ ಜತೆ ಕೆಲಸ ಮಾಡುತ್ತಿರುವ ಕೊಳ್ಳೇಗಾಲದ ತೇಜಸ್ವಿ ಈ ಚಿತ್ರಕ್ಕೆ ಆ್ಯಕ್ಷನ್–ಕಟ್ ಹೇಳುತ್ತಿದ್ದಾರೆ. ಹರಿಪ್ರಿಯಾ ಇಂಟೀರಿಯರ್ ಡಿಸೈನರ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರಂತೆ. ಅರ್ಜುನ್ ಜನ್ಯಾ ಸಂಗೀತ ಹೊಸೆಯುವ ಹೊಣೆ ಹೊತ್ತಿದ್ದಾರೆ. ಸಾಮಾನ್ಯ ಹುಡುಗನೊಬ್ಬನ ಪ್ರೇಮಪ್ರಹಸನವೇ ಈ ಚಿತ್ರದ ಹೂರಣ. ಬೆಂಗಳೂರು ಮತ್ತು ಆಸ್ಟ್ರೇಲಿಯಾದಲ್ಲಿ ಚಿತ್ರೀಕರಣ ನಡೆಸುವ ಸಿದ್ಧತೆಯನ್ನೂ ಅವರು ನಡೆಸಿದ್ದಾರೆ.

ಈ ಚಿತ್ರದಲ್ಲಿ ಇನ್ನೂ ಒಂದು ವಿಶೇಷ ಇದೆ. ಸೃಜನ್ ಲೋಕೇಶ್ ಮಗನೂ ಈ ಚಿತ್ರದಲ್ಲಿ ನಟಿಸುತ್ತಿದ್ದಾನೆ. ಹಾಗೆಯೇ ಸೃಜನ್ ಅಮ್ಮ ಗಿರಿಜಾ ಲೋಕೇಶ್ ಕೂಡ ಇರಲಿದ್ದಾರೆ. ಒಂದೇ ಕುಟುಂಬದ ಮೂವರನ್ನು ತೆರೆಯ ಮೇಲೆ ನೋಡಬಹುದು. ಮಗ ನಟಿಸಿದ ಚಿತ್ರಕ್ಕೆ ಸ್ವತಃ ಸೃಜನ್ ಲೋಕೇಶ್ ಅವರೇ ಆ್ಯಕ್ಷನ್–ಕಟ್ ಹೇಳಿ ತಮ್ಮ ನಿರ್ದೇಶನದ ಆಸೆಯನ್ನೂ ಈಡೇರಿಸಿಕೊಂಡಿದ್ದಾರೆ. ಈ ಚಿತ್ರವನ್ನು ನೋಡಿದ ಪ್ರೇಕ್ಷಕನೂ ಹೊಟ್ಟೆ ಹುಣ್ಣಾಗುವಂತೆ ನಗುತ್ತ 'ಎಲ್ಲಿದ್ದೆ ಇಲ್ಲೀತನಕ' ಎಂದು ತಮ್ಮನ್ನು ಹೃದಯಪೂರ್ವಕವಾಗಿ ಸ್ವಾಗತಿಸುತ್ತಾರೆ ಎಂಬ ನಂಬಿಕೆ ಸೃಜನ್ ಅವರಿಗಿದೆ.

